ಓ.ಎಸ್‌ಃ **198-2022**

ಪಿ. ಡಬ್ಲ್ಯೂ ಃ 01

**<u>ಸಾಕ್ಷಿಗೆ ದಿನಾಂಕ 24.05.2023 ರಂದು ಪ್ರಮಾಣ ವಚನ ನೀಡಲಾಯಿತು.</u>**

ನಾನು ಈ ದಾವೆಯಲ್ಲಿ ವಾದಿಯಾಗಿದ್ದು ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಪ್ರಮಾಣ ಪತ್ರದಲ್ಲಿ ಹೇಳಲಾದ ಎಲ್ಲಾ ವಿಷಯಗಳನ್ನು ವಕೀಲರ ಮೂಲಕ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ವಿಷಯಗಳು ಸತ್ಯವಾಗಿರುತ್ತವೆ. ಪ್ರಮಾಣ ಪತ್ರದಲ್ಲಿ ಇರುವ ಸಹಿ ನನ್ನ ಸಹಿ ಆಗಿರುತ್ತದೆ.

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ/ಶ್ರೀಮತಿ ಹೆಚ್ ಆರ್ ವಕೀಲರಿಂದ</u>**

ದಿನಾಂಕ 28.03.2019 ರ ಗಣಕೀಕೃತ ಕ್ರಯ ಪತ್ರದ ನಕಲನ್ನು ಹಾಜರುಪಡಿಸಿದ್ದು ನಿಪಿ 1 ಎಂದು, ಬೆಳಗೊಳ ಗ್ರಾಮ ಪಂಚಾಯಿತಿ ರವರು ನೀಡಿರುವ ನಮೂನೆ-ವಿ ಮತ್ತು 11 ಎ ಅನ್ನು ಹಾಜರುಪಡಿಸಿದ್ದು ನಿಪಿ 2 ಮತ್ತು 3 ಎಂದು, ದಿ. 04.01.2021 ರ ಭೂಪರಿವರ್ತನಾ ಆದೇಶದ ಗಣಕೀಕೃತ ನಕಲನ್ನು ಹಾಜರುಪಡಿಸಿದ್ದು ನಿಪಿ 4 ಎಂದು, ದಿ. 19.10.2022 ರ ಸಾಮಾನ್ಯ ರಶೀದಿಯನ್ನು ಹಾಜರುಪಡಿಸಿದ್ದು ನಿಪಿ 5 ಎಂದು, ದಿ. 17.02.2023 ರಂದು ಐ.ಸಿ.ಐ.ಸಿ ಬ್ಯಾಂಕ್ ರವರು ಕ್ರಮ ಸಂಖ್ಯೆ 1 ರಿಂದ 10 ದಾಖಲಾತಿಗಳು ತಮ್ಮ ವಶದಲ್ಲಿರುವ ಬಗ್ಗೆ ದೃಡೀಕರಣವನ್ನು ನೀಡಿದ್ದು ಅದನ್ನು ನಿಪಿ 6 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ನೀಡಲಾಯಿತು.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ